**O.S. No. 214-2017**

**DW-1**

**ದಿನಾಂಕಃ 26-09-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ. ಎಂ.ಸಿ.ಹೆಚ್ ವಕೀಲರಿಂದಃ**

1. ದಾವಾ ಸ್ವತ್ತಿನ ಸಂಖ್ಯೆ 245/ಬಿ , ಎಸ್.ಐ.ಹೆಚ್. ಎಸ್ ಇದೆ ಎಂದರೆ ಸರಿ. ಸದರಿ ಸ್ವತ್ತಿನ ಸರ್ವೆ ನಃ 2807 ಎಂದರೆ ಸರಿ. ಸದರಿ ಸ್ವತ್ತಿನ ಅಳತೆ 30 ಪೂ-ಪ X 40 ಉ-ದ ಅಡಿ ಇದೆ ಎಂದರೆ ಸರಿ. ಸದರಿ ಸ್ವತ್ತಿನ ಪೂರ್ವಕ್ಕೆ 244ಎ ಎಸ್.ಐ.ಹೆಚ್. ಎಸ್ ಇದೆ ಎಂದರೆ ಸರಿ ಮತ್ತು ಪಶ್ಚಿಮಕ್ಕೆ 245ಎ ಎಸ್.ಐ.ಹೆಚ್. ಎಸ್ ಇದೆ ಎಂದರೆ ಸರಿ. ಉತ್ತರಕ್ಕೆ 238 ಎಸ್.ಐ.ಹೆಚ್. ಎಸ್ ಇದೆ ಎಂದರೆ ಸರಿ. ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ.

2. ಸದರಿ ದಾವಾ ಸ್ವತ್ತು ಮೂಲತಃ ಕರ್ನಾಟಕಕ್ಕೆ ಗೃಹ ಮಂಡಳಿಗೆ ಸೇರಿತ್ತು ಎಂದರೆ ಸರಿ. ನಮ್ಮ ತಂದೆಯವರು 6ನೇ ತರಗತಿ ವರೆಗೆ ಮರಾಠಿ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಅವರು WCPM ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಕಾರಣ, ಅವರಿಗೆ ದಾವಾ ಸ್ವತ್ತನ್ನು ಕರ್ನಾಟಕ ಗೃಹ ಮಂಡಳಿ ಲೀಸ್ ಕಮ್ ಸೇಲ್ ಅಡಿಯಲ್ಲಿ ರೂ.3,167/- ಗಳ ಮೊತ್ತಕ್ಕೆ ನೀಡಿದ್ದರು ಎಂದರೆ ಸರಿ. ಸದರಿ ಲೀಸ್ ಕಮ್ ಸೇಲ್ ಅಡಿಯಲ್ಲಿ 10 ವರ್ಷಗಳ ವರೆಗೆ ಲೀಸ್ ನಲ್ಲಿಯೂ ತದನಂತರ ನನ್ನ ತಂದೆಗೆ ಮಾರಾಟ ಮಾಡುವ ಷರತ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಲೀಸ್ ಕಮ್ ಸೇಲ್ ಪತ್ರ ನೊಂದಾಯಿತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಲೀಸ್ ಕಮ್ ಸೇಲ್ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

3. ವಾದಿಯು ನನ್ನ ತಂದೆಯ ಹತ್ತಿರ ದಾವಾ ಸ್ವತ್ತನ್ನು ಯಾವಾಗ ಬಾಡಿಗೆ ಕೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ವಾದಿಯ ನಡುವೆ ಯಾವುದೇ ಬಾಡಿಗೆ ಕರಾರು ಪತ್ರವಾದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ವಾದಿಯು ರೂ.250/- ಗಳ ಬಾಡಿಗೆಯನ್ನು ನೀಡುತ್ತಿದ್ದರು.

ವಾದಿಯು ಒಂದರಿಂದ ಒಂದೂವರೆ ವರ್ಷಗಳ ವರೆಗೆ ಮಾತ್ರ ಬಾಡಿಗೆಯನ್ನು ನೀಡಿರುತ್ತಾರೆ. ನನ್ನ ತಂದೆಯವರು ಸನ್ 2019 ರಲ್ಲಿ ತೀರಿಕೊಂಡಿರುತ್ತಾರೆ. ವಾದಿಯು ಸನ್ 1987-1988 ಸಾಲಿನಿಂದಲೇ ನನ್ನ ತಂದೆಗೆ ಬಾಡಿಗೆ ಕೊಟ್ಟಿರುವುದಿಲ್ಲ. ಆ ಕುರಿತು ನನ್ನ ತಂದೆ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ, ಕೇವಲ ಬಾಯಿ ಮಾತಿನ ಮೂಲಕ ಕೇಳುತ್ತಿದ್ದರು.

4. ನನ್ನ ತಂದೆಯವರು ವಾದಿಯ ಕಡೆಯಿಂದ ರೂ.14,000/- ಗಳ ಹಣವನ್ನು ಸನ್ 1988 ರಲ್ಲಿ ಕೈಗಡವಾಗಿ ಪಡೆದಿದ್ದರು. ಸದರಿ ಹಣವನ್ನು ನನ್ನ ತಂದೆಯವರು ವಾದಿಗೆ ಮರುಪಾವತಿ ಮಾಡಲು ಹೋದಾಗ, ಅವರು ಹಣವನ್ನು ಪಡೆಯದೆ ನನ್ನ ತಂದೆಯ ಮೇಲ ದೌರ್ಜನ್ಯ ಎಸಗಿ, ದಾವಾಸ್ವತ್ತನ್ನು ಮಾರಾಟಾ ಮಾಡಿದ್ದೀರಿ ಎಂದು ಹೇಳಿದರು . ಆ ಕುರಿತಾಗಿ ನನ್ನ ತಂದೆಯವರು ವಾದಿಯ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ ಮತ್ತು ನಾವು ಬಡವರಾಗಿದ್ದೆವು ಎಂದು ನುಡಿಯುತ್ತಾರೆ.

5. ನಾನು ಕನ್ನಡ ಭಾಷೆಯಲ್ಲಿ 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಣ್ಣ ವಿನಾಯಕ ಡಿಪ್ಲೋಮಾದ ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾನೆ. ನನಗೆ, ನನ್ನ ತಾಯಿಗೆ ಮತ್ತು ನನ್ನ ಅಣ್ಣನಿಗೆ ಕನ್ನಡ ಭಾಷೆಯಲ್ಲಿ ಓದಲು- ಬರೆಯಲು ಬರುತ್ತದೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ.**